ಆವೇಶದಾಶಯಗಳು. ನಾನು ಅದನ್ನೋದಿ ಎಷ್ಟು ಪ್ರಭಾವಿತಳಾಗಿದ್ದೆನೆಂದರೆ – ಅಪ್ಪನೊಡನೆ ಇಂಥ ನಾಲ್ಕೂ ಗುಣಗಳಿರುವ ಕವಿ–ಕಲಿ ಎರಡೂ ಆಗಿರುವ ಹುಡುಗನೇ ನನಗೆ ಬೇಕೆಂದು ಯಾವತ್ತೂ ಹೇಳುತ್ತಿದ್ದೆ. ಆದರೆ – ಎಲ್ಲಿ? ಸಂಗೀತ? ನಾನೇ ಸಂಗೀತವಾಗಿದ್ದೆ, ಕಾವ್ಯವಾಗಿದ್ದೆ. ಭಾವೋತ್ಕಟ ಪ್ರೀತಿ ಅಪ್ಪ–ಅಮ್ಮನಿಂದ ಪಡೆದು, ಯುದ್ಧದ ಭೀಕರತೆಯ ಮೈಯಾರೆ ಅನುಭವಿಸಿಬಿಟ್ಟಿದ್ದೆ! ನನಗೆ ಇನ್ನಾರು ಏನನ್ನಾದರೂ ಕೊಡಲು ಸಾಧ್ಯವಿತ್ತು!? ಪ್ರೀತಿಯ ಚಿಲುಮೆಯ ಮೊಗೆ ಮೊಗೆದು ಕುಡಿದವಳಿಗೆ, ತುಂಬಿದ ಕೊಡದವಳಿಗೆ– ಅಪ್ಪನಂಥ ಪ್ರೀತಿ ಯಾರಿಂದ ಕೊಡಲು ಸಾಧ್ಯವಿತ್ತು? ಅವನ ಪಿಸುಮಾತಿಗೂ ಮಾಂತ್ರಿಕ ಶಕ್ತಿಯಿರುವುದು ಕಂಡಿದ್ದ ನನಗೆ ಅವನದಲ್ಲದ ಮಾತು, ನಗೆ ಯಾವುದೂ ಬೇಕೆನಿಸುತ್ತಿರಲಿಲ್ಲ. ಅಹಂಕಾರದ ತುತ್ತ ತುದಿ ಅನ್ನಿಸುತ್ತಿರಬೇಕು ನಿನಗೆ, ಅನ್ನಿಸಲಿ ಬಿಡು. ಆದರೆ ನಾನು ಬದುಕಿದ್ದೇ ಹಾಗೆ. ಬೇಡವಾದದ್ದು ಎಂದೂ ನನ್ನದಾಗಿಸಿಕೊಂಡವಳಲ್ಲ ನಾನು. ಹಾಗೆಂದೇ ಮೌನಿಯಾದೆ. ಹೊಸಮನೆಯಲ್ಲಿ ಎಲ್ಲರೂ ನಕ್ಕು ಕಲೆಯುತ್ತಿದ್ದರೆ – ನಾನು ಮೂಕರೋದನ ನಡೆಸುತ್ತಿದ್ದೆ. ಅಪ್ಪನನ್ನು ನೆನಪಿಸಿಕೊಂಡು ಬಿಕ್ಕುತ್ತಿದ್ದೆ. ಅವನನ್ನು ನೋಡಬೇಕೆಂಬ ಹಂಬಲ – ಹೊಸಬರಿಗೆ ನನ್ನ ಆಸೆ ಹೇಳಲು ಸಂಕೋಚ ಭಯ – ಆಗೆಲ್ಲ ಸುಮ್ಮನೆ ರೂಮಿನೊಳಗೆ ಗಿರಗಿರ ತಿರುಗುವ ಫ್ಯಾನಿನಡಿ ಕೂತು ಮನಸಾ ಅಳುತ್ತಿದ್ದೆ. ಮನೆಯ ಜಗುಲಿ, ಕುಂಬಿ, ಉಪ್ಪರಿಗೆಯ ಬೆಳದಿಂಗಳು ಎಲ್ಲೆಂದರಲ್ಲಿ ಕುಳಿತು ಉಣ್ಣುತ್ತಿದ್ದ ನನಗೆ ಇಲ್ಲಿನ ಟೇಬಲ್ ಮ್ಯಾನರ್ಸ್, ಜೋರಾಗಿ ಕೆಮ್ಮಿದರೆ ದುರುಗುಟ್ಟುವುದು, ಕಾಫಿ ಕುಡಿಯುವಾಗ ಸದ್ದು ಮಾಡಿದರೆ ಅಸಹನಿಸುವುದು; ತಿನ್ನುವಾಗ ಅನ್ನದಗುಳ ಕೆಳಗೆ ಚೆಲ್ಲಿದರೆ ಇರಿಯುವಂತೆ ನೋಡುವುದು, ಮಾತೆತ್ತಿದರೆ ಇನ್‌ಡಿಫರೆಂಟ್ ಎಂಬ ಮೂದಲಿಕೆ. ಇವೆಲ್ಲ ವಾಕರಿಕೆ ಹುಟ್ಟಿಸುತ್ತಿದ್ದವು. ಹಳ್ಳಿ ಮನೆಯಲ್ಲಿ ನಮಗೆ ಶಿಸ್ತು ಗೊತ್ತಿತ್ತು – ಆದರೆ ಅದೆಂದೂ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿರಲಿಲ್ಲ. ನಮಗೊಂದು ಚೌಕಟ್ಟಿರಲಿಲ್ಲವಾದರೂ ನಾವು ಹದ್ದು ಮೀರುತ್ತಿರಲಿಲ್ಲ. ನಮಗಿಷ್ಟ ಬಂದಂತೆ ಇರುವ ಸ್ವಾತಂತ್ರ್ಯ ನಮಗಿತ್ತು. ಆದರಿಲ್ಲಿ ಶಿಸ್ತು ಅದರ ಹೆಸರಿನಲ್ಲಿ ಎಲ್ಲವನ್ನೂ ಗೆರೆ ಕೊರೆಯಲಾಗಿತ್ತು. ಅಂಥದ್ದನ್ನು ಯಾವಾಗಲೂ ವಿರೋಧಿಸುತ್ತ ಬಂದ ಅಪ್ಪನ ಮಗಳಾದ ನನ್ನಂಥವಳಿಗೂ!

ನಾನು ಮೌನಿಯಾದೆ. ನನ್ನ ಮೌನ ಹೊರದೂಡಲೂ ಮತ್ತೆ ಪುಸ್ತಕಗಳಿಗೆ ಒಗ್ಗಿಕೊಂಡೆ. ನೀನು ನನ್ನ 'ಮರಳಿ ಬಂದಾಗ', 'ಕುಹೂಕುಹೂ, ಮರಿ ಕೋಗಿಲೆ' ಕಥೆಗಳನ್ನು ಓದಿದ್ದೀಯಾ? ಅವನ್ನು ಆವಾಗಲೇ ನಾನು ಬರೆದಿದ್ದು. ವೀಣೆ– ಬರವಣಿಗೆ ಎರಡೇ ನನ್ನ ಜೀವನದ ನಿಜ ಸಂಗಾತಿಗಳಾಗ. ಸುನಯನಾ ನದೀತೀರ, ಉಪ್ಪರಿಗೆ ಚಂದ್ರ ನೀಹಾರಿಕೆ – ತೋಟ, ಅಮ್ಮ–ಅಪ್ಪ ಏನಿತ್ತು ನನಗಲ್ಲಿ?

ನಾನು, 'ಕುಹೂಕೂಹು ಕೋಗಿಲೆ' – ಕಥೆಯಲ್ಲಿ ಬರೆದಿದ್ದೆ:

'ಮನಸ್ಸಿಗೊಲ್ಲದ ಆಘಾತ ಕ್ರಿಯೆಯೊಂದು ಪುನಃ ಪುನಃ ನಡೆಯತೊಡಗಿ ಅದೇ ದಿನನಿತ್ಯದ ಬದುಕಾದಾಗ ಮನಸ್ಸಿಗೆ ಜಡತೆ ತುಂಬುತ್ತದೆ. ಅದರಿಂದಾಗುವ ನೋವು–ದುಃಖಗಳ ಸಹಿಸಿ ಒಗ್ಗಿಕೊಳ್ಳುತ್ತದೆ. ಮೊದಮೊದಲು ಆಳದಲ್ಲಿ ಪ್ರತಿಭಟಿಸುವ ಮನಸ್ಸು, ದೇಹ, ಬುದ್ಧಿಗಳು ಇವೆಲ್ಲ ಸಹಜವೆನ್ನುವ ರೀತಿಯಲ್ಲಿ ಅದನ್ನು ಕ್ರಮೇಣ ಸ್ವೀಕರಿಸುತ್ತೇವೆ...

– ಈ ಮಾತುಗಳು ನನ್ನವೇ. ನನ್ನ ಎದೆಯಾಳದಿಂದ ಬಂದುವೇ! ಇವೆಲ್ಲ ಎಷ್ಟು ಕಠಿಣ ಸತ್ಯದ ನುಡಿಗಳು!

ನಾನಿಲ್ಲಿ ನನ್ನದಲ್ಲದ ಬದುಕನ್ನು – ನನ್ನದನ್ನುವುದೇನೂ ಇಲ್ಲದೆ –